# ಸ್ವಾಮಿ ಶಾರದಾನಂದರ ಸ್ಮೃತಿಗಳು

ಸಂಗ್ರಹ: **ಸ್ವರ್ಣಗೌರಿ**

ಶ್ರೀರಾಮಕೃಷ್ಣರ ನೇರ ಶಿಷ್ಯರಲ್ಲಿ ಒಬ್ಬರೂ, ತಮ್ಮ ಗುರುಗಳ ಅತ್ಯದ್ಭುತ ಜೀವನಚರಿತ್ರೆಯಾದ '**ಶ್ರೀರಾಮಕೃಷ್ಣ ಲೀಲಾಪ್ರಸಂಗ**'ದ ಕರ್ತೃಗಳೂ ಆದ ಸ್ವಾಮಿ ಶಾರದಾನಂದರ (೧೮೬೫–೧೯೨೭) ಜಯಂತಿಯನ್ನು ಈ ವರ್ಷ ಡಿಸೆಂಬರ್ ೨೪ ರಂದು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಅವರ ಜೀವನದ ಕೆಲವು ಸ್ಮೃತಿಗಳನ್ನು ಇಲ್ಲಿ ನೀಡುತ್ತಿದ್ದೇವೆ. ಸಂಗ್ರಹಕಾರರು ಮೈಸೂರು ಆಶ್ರಮದ ಭಕ್ತರು.

## ಕ್ರಿಕೆಟ್ ಪಂದ್ಯ ಅಥವಾ ಸ್ವರ್ಗ ದೊರೆಯುವುದೆ?

ಸ್ವಾಮಿ ವಿವೇಕಾನಂದರ ಪ್ರವಚನಗಳನ್ನು ಶೀಘ್ರಲಿಪಿಯಲ್ಲಿ ಬರೆದುಕೊಳ್ಳುತ್ತಿದ್ದ ಶೀಘ್ರಲಿಪಿಕಾರ ಜೆ.ಜೆ.ಗುಡ್‌ವಿನ್ ಒಮ್ಮೆ ಸ್ವಾಮಿ ಶಾರದಾನಂದರನ್ನು ಕ್ರಿಕೆಟ್ ಪಂದ್ಯ ವೀಕ್ಷಿಸಲು ಕರೆದೊಯ್ದನು. ಸ್ವಾಮಿ ವಿವೇಕಾನಂದರ ತಮ್ಮ ಮಹೇಂದ್ರನಾಥ ದತ್ತನೂ ಅವರೊಡನಿದ್ದನು. ಗುಡ್‌ವಿನ್ ಬಹಳ ಉತ್ಸುಕತೆಯಿಂದ ಕ್ರಿಕೆಟ್ ಪಂದ್ಯವನ್ನು ವೀಕ್ಷಿಸಿ ಆನಂದಿಸಿದನು. ಆದರೆ ಶಾರದಾನಂದರಿಗೆ ಅದು ಸಂತೋಷ ನೀಡಲಿಲ್ಲ. ಹಿಂದಿರುಗುತ್ತಿರುವಾಗ ಗಂಭೀರ ಭಾವದಲ್ಲಿದ್ದ ಸ್ವಾಮಿ ಶಾರದಾನಂದರು, ''ಕ್ರಿಕೆಟ್ ಪಂದ್ಯ ವೀಕ್ಷಿಸುವುದರಿಂದ ನನಗೇನು ಸ್ವರ್ಗ ಸಿಗುತ್ತದೆಯೆ?'' ಎಂದು ಪ್ರಶ್ನಿಸಿದರು. ಮಹೇಂದ್ರನಾಥನು ಕುಚೋದ್ಯದಿಂದ, ''ಸ್ವರ್ಗ ಬೇಕಾದರೆ ಬಸ್‌ನ ಛಾವಣಿಯ ಮೇಲೆ ಕುಳಿತುಕೊಳ್ಳಬೇಕು'' ಎಂದನು (ಅದು ಎರಡಂತಸ್ತಿನ ಬಸ್ ಆಗಿತ್ತು). ಗುಡ್‌ವಿನ್ ಸಹ ಇವರ ಸಂಭಾಷಣೆ ಕೇಳಿ ನಗತೊಡಗಿದನು. ಬಸ್‌ನೊಳಗೆ ಕುಳಿತರೆ ಧೂಮಪಾನ ಮಾಡಲಾಗದೆಂದು ಆ ಅಭ್ಯಾಸವಿರುವವರು ಮೇಲ್ಛಾವಣಿಯಲ್ಲಿ ಕುಳಿತು ಕೊಳ್ಳುವ ಪದ್ಧತಿಯಿತ್ತು ಅಲ್ಲಿ.

ಸ್ವಾಮಿಗಳ ಮನಸ್ಸನ್ನು ಭಗವಂತನೇ ಹೇಗೆ ಸಂಪೂರ್ಣವಾಗಿ ಆವರಿಸಿದ್ದನೆಂದರೆ, ಅಲ್ಲಿ ಪ್ರಪಂಚದ ಉಳಿದ ಯಾವುದಕ್ಕೂ ಸ್ಥಳವೇ ಇರಲಿಲ್ಲವೆಂಬುದು ಈ ಘಟನೆಯಿಂದ ತಿಳಿಯುತ್ತದೆ.

*('Saradananda – The Bliss of Knowledge', ಪ್ರವ್ರಾಜಿಕಾ ಪ್ರಬುದ್ಧಪ್ರಾಣಾ, ಶ್ರೀ ಶಾರದಾ ಮಠದ ಪ್ರಕಟಣೆ)*

## ಭಗವಂತನಿದ್ದಾನೆಯೆ?

ಸ್ವಾಮಿ ಶಾರದಾನಂದರು ಡಿಸೆಂಬರ್ ೧೫, ೧೮೯೬ ರಂದು (ಶ್ರೀರಾಮಕೃಷ್ಣರ ನೇರ ಶಿಷ್ಯರು ಹಾಗೂ ಶ್ರೀರಾಮಕೃಷ್ಣ ಮಹಾಸಂಘದ ಪ್ರಥಮ ಕಾರ್ಯದರ್ಶಿ) ಬಾಸ್ಟನ್ ನಗರದ ಮೆಟಾಫಿಸಿಕಲ್ ಕ್ಲಬ್‌ನಲ್ಲಿ 'ಸಂದೇಹದಿಂದ ನಂಬಿಕೆಯೆಡೆಗೆ' ಎಂಬ ವಿಚಾರವಾಗಿ ಪ್ರವಚನ ನೀಡಿದರು. ಪ್ರವಚನದ ನಂತರ ಇಬ್ಬರು ವಿಜ್ಞಾನಿಗಳು ಅವರ ಬಳಿಗೆ ಬಂದರು. ಅವರಲ್ಲಿ ಒಬ್ಬಾತನು ಸ್ವಾಮಿ ಶಾರದಾನಂದರನ್ನು ಕುರಿತು, ''ಭಗವಂತನಿದ್ದಾನೆಯೆ?'' ಎಂದು ಪ್ರಶ್ನಿಸಿದನು. ಸ್ವಾಮಿಗಳು ದೃಢವಾದ ಸ್ವರದಿಂದ, ''ಇದ್ದಾನೆ'' ಎಂದು ಉತ್ತರಿಸಿದರು.

ವಿಜ್ಞಾನಿ: ಇದ್ದರೆ ಅದಕ್ಕೆ ಪ್ರಮಾಣವೇನು?



ಸ್ವಾಮೀಜಿ: ಋಷಿವಾಕ್ಯ. ಅವರುಗಳು ತಾವೇ ಸ್ವತಃ ಭಗವಂತನ ಇರುವಿಕೆಯನ್ನು ಅನುಭವಿಸಿದ ನಂತರವೇ 'ದೇವರಿದ್ದಾನೆ' ಎಂದು ಘೋಷಿಸಿದ್ದಾರೆ.

ವಿಜ್ಞಾನಿ: ಅವರು ತಪ್ಪು ಮಾಡಿರುವ ಸಾಧ್ಯತೆಗಳಿರಬಹುದಲ್ಲವೆ?

ಸ್ವಾಮೀಜಿ: ಎಲ್ಲ ಋಷಿಗಳೂ ತಪ್ಪು ಮಾಡಲು ಸಾಧ್ಯವೇನು? ಒಂದು ವೇಳೆ ನೀನು ಇಂಗ್ಲೆಂಡ್ ನೋಡೇ ಇಲ್ಲವೆಂದಿಟ್ಟುಕೊಳ್ಳೋಣ. ಯಾರಿಗೆ ಇಂಗ್ಲೆಂಡ್ ಪರಿಚಯವಿದೆಯೋ ಅವರಿಂದ ನೀನು ಅದರ ಬಗ್ಗೆ ತಿಳಿದುಕೊಳ್ಳಬೇಕು. ಹಾಗೆಯೇ ಭಗವಂತನ ದರ್ಶನ ಪಡೆದವರ ವಾಕ್ಯಗಳಲ್ಲಿ ನೀನು ವಿಶ್ವಾಸವಿಡಬೇಕು. ಶ್ರೀರಾಮಕೃಷ್ಣರು, 'ನಾನು ಭಗವಂತನನ್ನು ನೋಡಿದ್ದೇನೆ, ನೀವು ಸಹ ಆಧ್ಯಾತ್ಮಿಕ ಸಾಧನೆ ಹಾಗೂ ವ್ಯಾಕುಲತೆಗಳ ಮೂಲಕ ಆತನ ದರ್ಶನ ಪಡೆಯಬಹುದು' ಎಂದರು. ಒಬ್ಬಾತನ ಹಾದಿಯಲ್ಲಿರುವ ಅಡಚಣೆ ಸಂದೇಹವೇ !

ಈ ಮಾತುಗಳನ್ನು ಆಲಿಸಿದ ಆ ವಿಜ್ಞಾನಿಗಳ ಮನದ ಸಂದೇಹದ ತೆರೆ ಮಾಯವಾಗಿ, ಭಗವಂತನ ಇರುವಿಕೆಯಲ್ಲಿ ವಿಶ್ವಾಸ

ವುಂಟಾಯಿತು. ಹೀಗೆ ಭಗವಂತನ ದರ್ಶನವಾದವರು ತಮ್ಮ ವಾಕ್‌ಶಕ್ತಿಯಿಂದಲೇ ಮತ್ತೊಬ್ಬರಿಗೆ ಆಧ್ಯಾತ್ಮಿಕತೆಯನ್ನು ಧಾರೆಯೆರೆಯಬಲ್ಲವರಾಗಿದ್ದರು. *(ಅಲ್ಲೇ, ಪು.೯೫-೯೬)*

## ಸಮಚಿತ್ತರು

ಶ್ರೀರಾಮಕೃಷ್ಣರ ಹದಿನಾರು ಜನ ನೇರ ಶಿಷ್ಯರಲ್ಲಿ ಸ್ವಾಮಿ ಶಾರದಾನಂದರು ಸಮಚಿತ್ತರೆಂದು ಜನಪ್ರಿಯರಾಗಿದ್ದರು. ಎಂತಹ ಸಮಯದಲ್ಲೂ ತಮ್ಮ ಮನಸ್ಸಿನ ಪ್ರಶಾಂತತೆಯನ್ನು ಕಳೆದುಕೊಳ್ಳುತ್ತಿರಲಿಲ್ಲ. ಸ್ವಾಮಿ ವಿವೇಕಾನಂದರೇ ಅವರನ್ನು ಈಲ್-ಮೀನಿಗೆ (ಒಂದು ಜಾತಿಯ ಮೀನು. ಅದರ ರಕ್ತವೆಂದೂ ಬಿಸಿಯಾಗದು) ಹೋಲಿಸಿ ಹಾಸ್ಯಮಾಡುತ್ತಿದ್ದರು. ಅವರು ಕೋಪಗೊಂಡದ್ದನ್ನು ಯಾರೂ ಎಂದೂ ನೋಡಿರಲಿಲ್ಲ.

ಸ್ವಾಮಿ ವಿವೇಕಾನಂದರ ಆಣತಿಯ ಮೇರೆಗೆ ೨೯ ವಯಸ್ಸಿನ ಸ್ಫುರದ್ರೂಪಿ ಯುವಕ ಸ್ವಾಮಿ ಶಾರದಾನಂದರು ಪ್ರಥಮ ಬಾರಿ ವೇದಾಂತ ಪ್ರಚಾರ ಕಾರ್ಯದಲ್ಲಿ ಸಹಾಯಹಸ್ತ ನೀಡಲು BISN REWA ಎಂಬ ಹಡಗಿನಲ್ಲಿ ಲಂಡನ್‌ಗೆ ಹೊರಟರು. ಹಡಗು ಭೂಮಧ್ಯ ಸಮುದ್ರಕ್ಕೆ (ಮೆಡಿಟರೇನಿಯನ್ ಸಮುದ್ರ) ಬಂದಾಗ ದೊಡ್ಡ ಬಿರುಗಾಳಿಯೆದ್ದು, ಇನ್ನೇನು ಹಡಗು ಮುಳುಗಲು ಪ್ರಾರಂಭವಾಯಿತು. ಪ್ರಯಾಣಿಕರೆಲ್ಲಾ ಪ್ರಾಣಭಯದಿಂದ ಚೀತ್ಕರಿಸುತ್ತಾ ಆಚೀಚೆ ಓಡತೊಡಗಿದರು; ಕೆಲವರು ಗಡಗಡನೆ ನಡುಗಲಾರಂಭಿಸಿದರು. ಒಂದೇ ಕ್ಷಣದಲ್ಲಿ ದೃಶ್ಯವೇ ಬದಲಾಗಿ ಹೋಯಿತು. ಮೃತ್ಯು ತಾಂಡವವಾಡುತ್ತಿರುವ ಭೀಕರ ದೃಶ್ಯ; ಎಂತಹ ಗಂಡೆದೆಯವರಿಗೂ ಝಲ್ಲೆನಿಸುತ್ತಿರುವಂತೆ ಇತ್ತು. ಅಂತಹ ಸಮಯದಲ್ಲೂ ಸ್ವಾಮಿ ಶಾರದಾನಂದರು ಮಾತ್ರ ದಿಕ್ಸೂಚಿಯಂತೆ ಮನಸ್ಸಿನ ಸಮತ್ವವನ್ನು ಕಳೆದುಕೊಳ್ಳದೆ ನಿಶ್ಚಲರಾಗಿ ಕುಳಿತಿದ್ದರು! ಸ್ವಲ್ಪ ಕಾಲದ ನಂತರ ಆಶ್ಚರ್ಯವೆಂಬಂತೆ ಬಿರುಗಾಳಿ ಇಳಿಮುಖವಾಗತೊಡಗಿತು. ಸ್ವಾಮೀಜಿ ಹಿಂದೆ ಹೇಗಿದ್ದರೋ, ಈಗಲೂ ಹಾಗೆಯೇ ಕುಳಿತಿದ್ದರು. ಅವರು ಕೇವಲ ಅನುದ್ವೇಗಿಗಳಲ್ಲ; ಜಿತೇಂದ್ರಿಯರೂ ಆಗಿದ್ದರು.

ಮುಂದೊಮ್ಮೆ ಅವರ ಸೇವಕರಾರೋ ಆ ಘಟನೆ ಕುರಿತು ಪ್ರಶ್ನಿಸಿದಾಗ ಸ್ವಾಮೀಜಿ, ''ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರ ಸಂಗದಲ್ಲಿ ನಾವೇನು ಸುಮ್ಮನೆ ಕಾಲಹರಣ ಮಾಡಿದೆವೆಂದುಕೊಂಡೆಯೇನು?'' ಎಂದು ಉತ್ತರಿಸಿದರು! *(ಅಲ್ಲೇ, ಪು.೧೬-೧೭)*

ಇಂತಹ ಸಾಧುಗಳು ಪ್ರಥಮ ಬಾರಿ ಪಾಶ್ಚಾತ್ಯ ದೇಶದಲ್ಲಿ ಪ್ರವಚನ ನೀಡಲು ಹೋದಾಗ ಹೆದರಿ ಕಂಗಾಲಾದರು. ಸಮತ್ವವನ್ನು ಕಳೆದುಕೊಂಡ ಮನಸ್ಸು ಪ್ರಕ್ಷುಬ್ಧವಾಯಿತು. ಇದರಿಂದಾಗಿ ಒಂದೂವರೆ ವರ್ಷಗಳ ಹಿಂದೆ ಅನುಭವಿಸಿದ ಮಲೇರಿಯಾ ಜ್ವರ ಮತ್ತೆ ಮರುಕಳಿಸಿತು. ಅಂತಹ ಜ್ವರದಲ್ಲೂ ಪ್ರವಚನದ ಭಯದಿಂದ ಕುಗ್ಗಿ, ''ಅಯ್ಯೋ! ನರೇಂದ್ರ ಪ್ರವಚನ ನೀಡದಿದ್ದರೆ ನನ್ನನ್ನು ಸುಮ್ಮನೆ ಬಿಡುವುದಿಲ್ಲ'' ಎಂದು ಬಡಬಡಿಸುತ್ತಿದ್ದುದನ್ನು ಸ್ವಾಮಿ ವಿವೇಕಾನಂದರ ತಮ್ಮ ಮಹೇಂದ್ರನಾಥನು ಕೇಳಿಸಿಕೊಂಡನು. ಆತನೂ ಸಹ ಜ್ವರದಿಂದ ನರಳುತ್ತಿದ್ದನು. ಸ್ವಾಮಿ ಶಾರದಾನಂದರು,''ಮಾನ್ಯರೇ ಮತ್ತು ಮಾನಿನಿಯರೇ'' ಎಂದು ತಾವು ಹೇಳಬೇಕಾಗಿದ್ದ ವಿಷಯ ಗಳನ್ನು ಮಹೇಂದ್ರನಿಗೆ ಒಪ್ಪಿಸುತ್ತಾ ಪುನಃ ಪುನಃ ಅಭ್ಯಸಿಸುತ್ತಿದ್ದರು. ಸಂಜೆ ಸುಮಾರು ಐದು ಗಂಟೆಯ ವೇಳೆಗೆ ಬಂದ ಸ್ವಾಮಿ ವಿವೇಕಾನಂದರು, ಪರಿಸ್ಥಿತಿ ನೋಡಿ ಹಾಸ್ಯ ಮಾಡುತ್ತಾ ಬೈಗುಳಗಳ ಸುರಿಮಳೆ ಆರಂಭಿಸಿದರು. ಈಗ ಶಾರದಾನಂದರು ಸ್ವಲ್ಪ ಶಾಂತರಾದಂತೆ ಕಂಡಿತು.

ಮಾರನೆಯ ದಿನ ಪುನಃ ಇವರೀರ್ವರನ್ನು ಕಾಣಲು ಬಂದ ಸ್ವಾಮೀಜಿ, ಪರಿಸ್ಥಿತಿ ಸುಧಾರಿಸದಿರುವುದನ್ನು ಕಂಡು, ''ಪ್ರವಚನಕ್ಕೆ ಜ್ವರದ ನೆಪ ಹೂಡಿದ್ದೀಯಾ'' ಎಂದು ಲೇವಡಿ ಮಾಡುತ್ತಾ ಪಕ್ಕದ ಕೋಣೆಗೆ ಹೋಗಿ ಗಂಭೀರ ಭಾವದಲ್ಲಿ ಕುಳಿತರು. ಹತ್ತು, ಹದಿನೈದು ನಿಮಿಷಗಳಲ್ಲಿ ತಮ್ಮ ಬಲವಾದ ಇಚ್ಛಾಶಕ್ತಿಯಿಂದ ಇಬ್ಬರ ಕಾಯಿಲೆಯನ್ನೂ ಗುಣಪಡಿಸಿಬಿಟ್ಟರು! ಕೂಡಲೆ ಬಂದ ಸ್ವಾಮೀಜಿಯವರ ಈ ಅದ್ಭುತ ಶಕ್ತಿಯನ್ನು ಕಂಡು ಬೆರಗಾದ ಸ್ವಾಮಿ ಶಾರದಾನಂದರು ಅವರ ಎರಡೂ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಮಕ್ಕಳಂತೆ ಅಳುತ್ತಾ, ''ನನ್ನನ್ನು ಈಗ ಗುಣಪಡಿಸಿದ್ದೀಯೆ, ಹಾಗೆಯೇ ನನ್ನ ಮನಸ್ಸನ್ನು ಊರ್ಧ್ವಮುಖಗೊಳಿಸು'' ಎಂದು ಪ್ರಾರ್ಥಿಸಿದರು, ದೀನರಾಗಿ. ಸ್ವಾಮೀಜಿ ನಗುತ್ತಾ, ''ಎದ್ದೇಳು obstinate wretch! (ಹಟಮಾರಿ ನೀಚ!) ಪ್ರವಚನದಿಂದ ತಪ್ಪಿಸಿಕೊಳ್ಳಲು ಜ್ವರ ತರಿಸಿಕೊಂಡೆಯೇನು? ನೀನು ಪ್ರವಚನ ನೀಡಲೇಬೇಕು, ಇಲ್ಲದಿದ್ದರೆ ನಿನಗೆ ಚೆನ್ನಾಗಿ ಬಾರಿಸುತ್ತೇನೆ, ನಾಲ್ಕು ಅಂತಸ್ತಿನ ಈ ಕಿಟಕಿಯಿಂದ ನಿನ್ನನ್ನು ಒಗೆಯುತ್ತೇನೆ. ಇಲ್ಲವಾದರೆ ಅನಾಥಾಲಯದಲ್ಲಿ ಬಿಸಾಡಿಬಿಡುತ್ತೇನೆ! ನಿನ್ನನ್ನು ಇಲ್ಲಿಗೆ ಕರೆತರಲು ಎಷ್ಟು ಹಣವನ್ನು ವ್ಯಯಮಾಡಿರುವೆ ಗೊತ್ತಿದೆಯೆ?'' ಎಂದು ಹುಸಿಕೋಪ ಪ್ರದರ್ಶಿಸುತ್ತಾ ಗುಡುಗಿದರು. ಶಾರದಾನಂದರು ಸಹ ಪ್ರತಿಯಾಗಿ ನಗುತ್ತಾ, ''ನಿನ್ನಿಚ್ಛೆ ಬಂದಂತೆ ನನ್ನನ್ನು ಹೊಡಿ, ಬಡಿ, ಬಿಸಾಡು. ಆದರೆ ನನ್ನ ಮನಸ್ಸನ್ನು ಸರಿಪಡಿಸದ ಹೊರತು ನಿನಗೆ ಏಳಲೂ ಬಿಡುವುದಿಲ್ಲ'' ಎಂದು ತಮ್ಮ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸಿದರು. ತಮ್ಮ ಮೇಲೆ ಆ ಸಹೋದರನಿಗಿದ್ದ ಪ್ರೀತಿಯನ್ನು ಕಂಡು ಕರಗಿದ ಸ್ವಾಮೀಜಿ ಸಂತುಷ್ಟರಾಗಿ ಮೃದುಧ್ವನಿಯಲ್ಲಿ , '''ಆಯಿತಾಯಿತು, ಏಳು, ಏದ್ದೇಳು'' ಎನ್ನುತ್ತಾ ಹೊರಟರು. ಸ್ವಾಮೀಜಿ ಹೋದ ನಂತರ ಶಾರದಾನಂದರು ಮಹೇಂದ್ರನ ಬಳಿ, ''ಓಹ್! ನನಗೆ ತಿಳಿದಿದ್ದ ಆ ಹಳೆಯ ನರೇಂದ್ರ ಇನ್ನಿಲ್ಲ. ಕೇವಲ ಇಚ್ಛಾಬಲದಿಂದ ಅನೇಕ ವರ್ಷಗಳಿಂದ ನರಳುತ್ತಿದ್ದ ಈ ಕಾಯಿಲೆಯನ್ನು ಗುಣಪಡಿಸಿಬಿಟ್ಟ. ಆತನೊಡನೆ ಮಾತನಾಡುವಾಗ ಇನ್ನು ನಾನು ಎಚ್ಚರಿಕೆಯಿಂದ ಇರಬೇಕು'' ಎನ್ನುವಾಗ ಅವರ ಹೃದಯದಲ್ಲಿ ನರೇಂದ್ರನ ಮೇಲಿದ್ದ ಭಯಭಕ್ತಿಗಳು ಇಮ್ಮಡಿಸಿದವು!

*(ಅಲ್ಲೇ, ಪು.೨೮-೨೯)*